3

# ಪರಿಶುದ್ಧಾತ್ಮನು ಹಾಗೂ ಪ್ರಕಟನೆ

*"ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆ ಪಡಿಸುವನು" (ಯೋಹಾನ 16:12-14).*

ಆಯ್ಕೆಯಾದ ಜನರು ಮಾತಾಡುವಂತೆ ಹಾಗೂ ದೇವರ ವಾಕ್ಯವನ್ನು ಬರೆಯುವಂತೆ ಮಾನವತೆಗೆ ಆತನ ಸಂದೇಶವನ್ನು ಅವರಿಗೆ ಬೋಧಿಸುವುದು ಪರಿಶುದ್ಧಾತ್ಮನ ಪ್ರಮುಖ ಜವಾಬ್ದಾರಿಕೆಯಾಗಿತ್ತು. ಪರಿಶುದ್ಧಾತ್ಮನ ಮುಖಾಂತರ ದೇವರು ಅವರಿಗೆ ತಿಳಿಯಪಡಿಸಿದ ಪ್ರಕಟನೆಯನ್ನು ಬೈಬಲ್ ಒಳಗೊಂಡಿರುತ್ತದೆ.

## ಸಂದೇಶವನ್ನು ಆತ್ಮನು ಹೇಗೆ ಪ್ರಕಟಿಸಿದನು?

ಪೌಲನು *theopnustos* ("ದೇವರು - ಉಸುರಿದ") ಎಂಬ ಪದವನ್ನು ಪರಿಶುದ್ಧ ಬರಹಗಳು ಹೇಗೆ ಕೊಡಲ್ಪಟ್ಟವು ಎಂಬುದನ್ನು ವಿವರಿಸಲು ಉಪಯೋಗಿಸಿದನು. ಇದು "ದೇವರಿಂದ ಪ್ರೇರೇಪಿಸಲ್ಪಟ್ಟಿತ್ತು" ಎಂದು ಭಾಷಾಂತರಿಸಲ್ಪಟ್ಟಿದೆ: "ದೈವ ಪ್ರೇರಿತ ವಾದ ಪ್ರತಿಯೊಂದು ಲೇಖನವೂ ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು" (2 ತಿಮೊಥೆ 3:16, 17; ಒತ್ತಿ ಹೇಳಿದ್ದು ನನ್ನದು). ಈ ವಾಕ್ಯವು ದೇವರು ಉಪಯೋಗಿಸಿದ ಸಾಧನಗಳನ್ನು ವಿವರಿಸದೇ ಇರುವದರಿಂದ, ದೇವರು ತನ್ನ ವಾಕ್ಯವನ್ನು ಹೀಗೆ ಪ್ರಕಟಿಸಿದನು ಎಂಬುದನ್ನು ಕಲಿತು ಕೊಳ್ಳಲು ನಾವು ಇತರ ವಾಕ್ಯಗ ಳನ್ನು ಅಭ್ಯಸಿಸತಕ್ಕದ್ದು.

*ಪರಿಶುದ್ಧಾತ್ಮನ ಮಾರ್ಗದರ್ಶನದ ಮುಖಾಂತರ* ಆಯ್ಕೆಯಾದ ಜನರಿಗೆ ದೇವರು ಪರಿಶುದ್ಧ ಬರಹಗಳನ್ನು ಕೊಟ್ಟನು ಎಂದು ಬೈಬಲ್ ಬೋಧಿಸುತ್ತದೆ. ಅವರು ಬರೆದದ್ದು ಅವರಿಗೆ ಪರಿಶುದ್ಧಾತ್ಮನಿಂದ ಪ್ರಕಟಿಸಲ್ಪಟ್ಟಿತು. ಪರಿಶುದ್ಧ ಬರಹಗಳನ್ನು ಬರೆದವರು ತಾವು ಬರೆದದ್ದನ್ನು ಉತ್ಪಾದಿಸಲಿಲ್ಲ.

ಹಾಗೆಯೇ, ಯೇಸು ತನ್ನ ಅಪೊಸ್ತಲರಿಗೆ ಹೇಳಿದನು (ಮತ್ತಾಯ 10:2-4) "... ಹೇಗೆ ಮಾತಾಡಬೇಕು ಏನು ಹೇಳಬೇಕು ಎಂದು ಚಿಂತೆ ಮಾಡಬೇಡಿರಿ; ಆಡತಕ್ಕ ಮಾತು ಆ ಗಳಿಗೆಯಲ್ಲಿ ನಿಮಗೆ ಸೂಚನೆಯಾಗುವದು. ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು" (ಮತ್ತಾಯ 10:19, 20). ಯೇಸು ವಾಗ್ದಾನ ಮಾಡಿದ್ದನ್ನು ಗಮನಿಸಿರಿ: (1) ತಾವು "ಹೇಗೆ" ಮಾತಾಡಬೇಕು ಎಂಬುದರ ಬಗ್ಗೆ ಅವರು ಚಿಂತಿಸಬಾರದು. (2) ಅವರು 'ಏನನ್ನು' ಹೇಳ ಬೇಕೆಂಬುದರ ಬಗ್ಗೆ

ಕೂತೂಹಲವುಳ್ಳವರಾಗಿರಬಾರದು, ಅವರ ಭರವಸೆಗೆ ಕಾರಣವು (3) ಅವರು ಏನು ಮಾತಾಡಬೇಕು ಎಂಬುದು ಅವರಿಗೆ "ಕೊಡಲ್ಪಡುವುದು." (4) ಮಾತನಾಡುವವರು ಅವರಲ್ಲ, ಆದರೆ (5) ಅವರಲ್ಲಿ ಮಾತಾಡುವಾತನು ಆತ್ಮ ನಾಗಿರುವನು.

ಆದುದರಿಂದ ಅಪೊಸ್ತಲರು ಬೋಧಿಸಿದ್ದು, ಅವರೊಂದಿಗೆ ಉತ್ಪತ್ತಿಯಾಗಲಿಲ್ಲ. ಅವರ ಮಾತುಗಳು ಅವರಿಗೆ ಪರಿಶುದ್ಧಾತ್ಮನಿಂದ ಕೊಡಲ್ಪಟ್ಟವು (1 ಕೊರಿಂಥ 2:13). ಈ ವಿಚಾರವನ್ನು ಆಕ್ಷೇಪಿಸಿದವರಲ್ಲಿ ಕೆಲವರು, ಗ್ರಂಥಕರ್ತರು ತಮ್ಮ ಸ್ವಂತ ಶೈಲಿಗಳಲ್ಲಿ ಬರೆದದ್ದರಿಂದ, ಬರಹಗಾರರು ತಮ್ಮ ಸ್ವಂತ ಮಾತುಗಳಲ್ಲಿ ಪ್ರೇರೇಪಿತ ಬೋಧನೆಗಳನ್ನು ಬರೆಯಲು ವಿಚಾರಗಳು ಮಾತ್ರವೇ ಕೊಡಲ್ಪಟ್ಟಿರ ಬಹುದೆಂದು ಸೂಚಿಸುತ್ತಾರೆ. ಅದು ಅನಾವಶ್ಯಕವಾದ ತೀರ್ಮಾನವಾಗಿದೆ ಹಾಗೂ ಏನು ಸಂಭವಿಸುವುದು ಎಂದು ಯೇಸು ಹೇಳಿದ್ದಕ್ಕೆ ವಿರುದ್ಧವಾದದ್ದಾಗಿದೆ.

## ತಮ್ಮ ಶೈಲಿಗಳನ್ನು ಉಪಯೋಗಿಸಿದರು

ಪರಿಶುದ್ಧಾತ್ಮನು ಪ್ರತಿಯೊಬ್ಬ ಬರಹಗಾರನ ಪದ ಸಂಗ್ರಹವನ್ನೂ ಸ್ಥಳಿಕ ಭಾಷೆಯನ್ನೂ ಉಪಯೋಗಿಸಬಹುದಾದರೆ, ದೇವರ ವಾಕ್ಯವನ್ನು ಪ್ರಕಟಿಸಲಿಕ್ಕೆ ಅವನ ಅದ್ವಿತೀಯ ಶೈಲಿಯನ್ನೂ ಪ್ರಕಟಪಡಿಸುವ ವಿಧಾನವನ್ನೂ ಯಾಕೆ ಉಪಯೋಗಿ ಸಬಾರದು? ಚತುರ ವಾದ್ಯಗಾರನು ಒಂದೇ ರಾಗವನ್ನು ವಿವಿಧ ವಾದ್ಯಗಳ ಮೇಲೆ ಬಾರಿಸ ಬಲ್ಲನು. ತರಬೇತಿ ಹೊಂದಿದ ಕೇಳುಗನು ರಾಗವನ್ನು ಕೇಳಿ ಯಾವ ವಾದ್ಯವು ಬಾರಿಸಲ್ಪಡುತ್ತಿದೆ ಯೆಂದು ಗುರುತಿಸಬಲ್ಲನು. ಪ್ರತಿಯೊಂದು ವಾದ್ಯಕ್ಕೆ ಭಿನ್ನವಾದ ಸ್ವರವಿರುತ್ತದೆ, ಆದರೆ ಚೆನ್ನಾಗಿ ಬಾರಿಸಿದ ರಾಗವು ಯಾವಾಗಲೂ ಒಂದೇಯಾಗಿರುತ್ತದೆ. ಅದೇ ರೀತಿಯಲ್ಲಿ, ಪರಿಶುದ್ಧಾತ್ಮನು ಪ್ರತಿಯೊಬ್ಬ ದೈವಪ್ರೇರಿತ ಮನುಷ್ಯನ ವೈಯಕ್ತಿಕ ಬರಹ ಶೈಲಿಯನ್ನು ಉಪಯೋಗಿಸಿದನು. ಮನುಷ್ಯನ ವ್ಯಕ್ತಪಡಿಸುವಿಕೆಯ ವಿಧಾನವನ್ನು ಉಪಯೋಗಿ ಸುವಾಗ, ಆತನು ಹೇಳಲು ಬಯಸಿದ್ದನ್ನೇ ನಿಶ್ಚಿತವಾಗಿ ಹೇಳಿದನು.

R. C. H. Lenski ಅವರು ಸರಿಯಾಗಿ ಗಮನಿಸಿದ್ದಾರೆ,

> ಸುವಾರ್ತೆಯನ್ನು ದಾಖಲೆ ಮಾಡುವಾಗ ಪರಿಶುದ್ಧಾತ್ಮನು ಪ್ರತಿಯೊಬ್ಬ ಬರಹಗಾರನನ್ನು ಅವನ ಪದಗಳ ಸಂಗ್ರಹವನ್ನು ಮತ್ತು ಅವನ ವೈಯಕ್ತಿಕ ಶೈಲಿಯನ್ನು ಉಪಯೋಗಿಸಿದನು ಎಂಬ ಸಂಗತಿಯು, ಪರಿಶುದ್ಧಾತ್ಮನ ಬೋಧನೆಯಿಂದ ಯಾಂತ್ರಿಕವಾದ ಪ್ರತಿಯೊಂದನ್ನು ತೆಗೆದು ಹಾಕಲ್ಪಟ್ಟಿತು ಎಂಬುದನ್ನು ತೋರಿಸುತ್ತದೆ. ಒಂದೇ ರೀತಿಯ ಪದಗಳ ಸಂಗ್ರಹವನ್ನು ಮತ್ತು ಅದೇ ಶೈಲಿಯನ್ನು ಎಲ್ಲಾ ಬರಹಗಾರರು ಉಪಯೋಗಿಸಬೇಕೆಂದು ಆತನು ಒತ್ತಾಯ ಮಾಡಿದ್ದರೆ ಆತನು ಯಾಂತ್ರಿಕವಾಗಿ ಮುಂದುವರಿದನು ಎಂಬ ಸಂಶಯಕ್ಕೆ ಒಳಪಡಬಹುದು ಮತ್ತು ಆಗ ಮಾತ್ರವೇ, ಮತ್ತು ಆಗಲೂ ಸಹ ನಾವು ತಪ್ಪಾಗಿರಬಹುದು. ಭಿನ್ನವಾದ ಲೇಖಕರನ್ನು ದೈವಿಕ ಶ್ರೇಷ್ಠ ಬೋಧಕನು ಉಪಯೋಗ ಮಾಡಿದ್ದರ ಪರಿಣಾಮವಾಗಿ ಬಂದ ಎಲ್ಲಾ ವಿವಿಧತೆಯ ಮಧ್ಯದಲ್ಲಿ ಒಂದು ಬೆರಗುಗೊಳಿಸುವ ಸಂಗತಿಯು ನಿಂತು ಕೊಳ್ಳುತ್ತದೆ: ಯಾವುದೇ ಬರಹಗಾರನು ಸುಳ್ಳು ಮಾತು ಹೇಳುವದಿಲ್ಲ, ಸುಳ್ಳು ಪದವನ್ನಾಗಲೀ ಮಾತುಗಳನ್ನಾಗಲೀ ಉಪಯೋಗಿಸುವದಿಲ್ಲ, ಇಲ್ಲವೇ ಭಿನ್ನವಾದ ಶೈಲಿಯಲ್ಲಿ ಇನ್ನೊಬ್ಬ ಪರಿಶುದ್ಧ ಬರಹಗಾರನು ವ್ಯಕ್ತಪಡಿಸಿದ್ದನ್ನು ತನ್ನ ಸ್ವಂತ ಶೈಲಿಯಲ್ಲಿ ವ್ಯಕ್ತಪಡಿಸಿದ ಒಂದೇ ಒಂದು ಹೇಳಿಕೆಯಲ್ಲಿಯೂ ವಿರೋಧಿಸಿರುವದಿಲ್ಲ.[1]

**ತಮ್ಮ ಮಾತುಗಳನ್ನು ಉಪಯೋಗಿಸಿದರು**

ದೈವಪ್ರೇರಿತ ಜನರಿಗೆ "ಮಾತುಗಳಲ್ಲಿ" ಸಂದೇಶವನ್ನು ಪರಿಶುದ್ಧಾತ್ಮನು ಪ್ರಕಟಿಸಿದನೆಂದು ಪೌಲನು ಬೋಧಿಸಿದನು. "ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳಿದು ಕೊಳ್ಳು ವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸು ತ್ತೇವೆ" (1 ಕೊರಿಂಥ 2:12, 13). ಪೌಲನು ಪರಿಶುದ್ಧಾತ್ಮನ ಸಂಗತಿಗಳನ್ನು ಆತ್ಮನಿಂದ ಕಲಿಸಲ್ಪಟ್ಟ "ಮಾತುಗಳಲ್ಲಿ" ವ್ಯಕ್ತಪಡಿಸಿದನು.

"ಅಪೊಸ್ತಲರು ಮಾತಾಡುವ ಮಾತುಗಳನ್ನೆ ಪರಿಶುದ್ಧಾತ್ಮನಿಂದ ಅವರಿಗೆ ಕಲಿಸಲ್ಪಟ್ಟವು. 'ಮಾತುಗಳಿಗೆ' ಇರುವಂತೆ ಆತನು ಅವರಿಗೆ ಬೋಧಕನಾಗಿದ್ದಾನೆ. ಪರಿಶುದ್ಧ ಬರಹಗಳಲ್ಲೆಲ್ಲಾ ಬೋಧಿಸಲ್ಪಟ್ಟ ಮತ್ತು ಪರಿಶುದ್ಧ ಬರಹಗಳಲ್ಲಿ ನಿಜವಾಗಿಯೂ ಘಟನಾತ್ಮಕವಾಗಿಯೂ ಸ್ಪಷ್ಟವಾಗಿರುವ ಬಾಯ್ಕೆರೆ ಪ್ರೇರೇಪಣೆಗಾಗಿ ಇದು ಸಕಾರಾತ್ಮಕ ರುಜುವಾತಾಗಿದೆ"[2] ಎಂದು Lenski ಹೇಳಿದ್ದಾನೆ. ಕೇವಲ ವಿಚಾರಗ ಳನ್ನು ಪ್ರಕಟಿಸುವ ಬದಲು, ಪರಿಶುದ್ಧಾತ್ಮನು ತಾನು ಪ್ರೇರೇಪಿಸಿದವರಿಂದ ಉಪಯೋಗಿಸಲ್ಪಡುವ ಮಾತುಗಳನ್ನೆ ಕೊಟ್ಟನು.

ಪರಿಶುದ್ಧ ಬರಹಗಳನ್ನು ಬರೆಯುವದನ್ನು ಪರಿಶುದ್ಧಾತ್ಮನು ಹೇಗೆ ಪ್ರೇರೇಪಿಸಿದ ನೆಂಬುದನ್ನು ಅರ್ಥಮಾಡಿ ಕೊಳ್ಳುವಲ್ಲಿ ಮಹತ್ವದ ಒಂದು ವಾಕ್ಯವು 1 ಕೊರಿಂಥ 2:12, 13:

> ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವು ಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ.

ಈ ವಾಕ್ಯವನ್ನು ಅರ್ಥಮಾಡಿ ಕೊಳ್ಳಲಿಕ್ಕೆ "ನಾವು" ಎಂಬದರಿಂದ ಪೌಲನು ಯಾರೆಂದು ಅರ್ಥಮಾಡಿದನೆಂಬುದನ್ನು ಮೊದಲು ನಾವು ನಿರ್ಧರಿಸತಕ್ಕದ್ದು. ಕೆಲವುಸಲ ಪೌಲನು "ನಾನು" ಎಂದು ಪೌಲನು ತನಗೆ ಸಂಬಂಧಿಸಿಕೊಂಡನು ಆದರೆ ಇತರ ಸಮಯಗಳಲ್ಲಿ - ತನ್ನನ್ನು ಅಷ್ಟೇ ಅಲ್ಲ, ಇತರ ಪ್ರೇರಿತ ಬೋಧಕರು ಗಳನ್ನು ಉದಾಹರಣೆಯಂತೆ ಮತ್ತು ಅಧಿಕಾರಿಕಳಂತೆ ಉಪಯೋಗಿಸಿ - ಅವನು "ನಾವು" ಎಂಬುದನ್ನು ಉಪಯೋಗಿಸಿದನು. 1 ಕೊರಿಂಥ 1ರ ಪ್ರಥಮ ಭಾಗದಲ್ಲಿ ಸತತವಾಗಿ ಪ್ರಥಮ ಪುರುಷ "ನಾನು" ಎಂಬುದನ್ನು ಉಪಯೋಗಿಸಿದನು (ವಚನಗಳು 4, 10-12, 14, 16); ಹೀಗಿದ್ದರೂ, ಅನಂತರದಲ್ಲಿ ಈ ಅಧ್ಯಾಯದಲ್ಲಿ "ನಾವು" ಎಂಬುದಕ್ಕೆ ತಿರುಗಿದನು: "ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ, ಇಂಥ ಕ್ರಿಸ್ತನ ಸಂಗತಿಯು ಯೆಹೂದ್ಯರಿಗೆ ವಿಘ್ನವೂ ಅನ್ಯಜನರಿಗೆ ಹುಚ್ಚುಮಾತೂ ಆಗಿದೆ" (ವಚನ 23). ಈ ವಚನದಲ್ಲಿ "ನಾವು," ಎಂದು ಹೇಳಿದಾಗ ಕೇಳುಗರನ್ನು ಸಂಬಂಧಿಸಿ ಹೇಳಲಿಲ್ಲ, ಆದರೆ ತನಗೂ ಮತ್ತು ಇತರ ಪ್ರೇರಿತ ಪ್ರಸಂಗಿಗಳಿಗೂ ಸಂಬಂಧಿಸಿ ಹೇಳಿದನು.

2ನೆಯ ಅಧ್ಯಾಯದ ಪ್ರಥಮ ಭಾಗದಲ್ಲಿ ತನ್ನನ್ನು "ನಾನು" ಎಂದು ಹೇಳಿ

(ವಚನಗಳು 1-3) ಅದೇ ನಮೂನೆಯನ್ನು ಅನುಸರಿಸಿದನು. ವಚನ 6 ಮತ್ತು ವಚನ 7ಎ ದಲ್ಲಿ ದೇವರ ವಾಕ್ಯದ ಇತರ ಬೋಧಕರಿಗೆ ಸಂಬಂಧಿಸಿದನು: "ಆದರೂ ಪ್ರವೀಣರಲ್ಲಿ ಜ್ಞಾನವನ್ನೇ ಹೇಳುತ್ತೇವೆ ... ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೆ ಹೇಳುತ್ತೇವೆ."

ಈ ವಿಧಾನವನ್ನು ಅಲಕ್ಷಿಸಿ, ಕೆಲವರು 1 ಕೊರಿಂಥ 2:12ರಲ್ಲಿ "ನಾವು" ಎಂಬ ಪದದಲ್ಲಿ ಪ್ರೇರೆಪಣೆಯಿಲ್ಲದ ಕ್ರೈಸ್ತರನ್ನು ಒಳಗೊಂಡಿರುತ್ತದೆ. ಪರಿಶುದ್ಧಾತ್ಮನು ತಮಗೆ ಅದರ ಅರ್ಥವನ್ನು ಪ್ರಟಿಸುವದರಿಂದ ಕ್ರೈಸ್ತರು ದೇವರ ವಾಕ್ಯವನ್ನು ಅರ್ಥ ಮಾಡಿಕೊಳ್ಳುವರೆಂದು ಅವರು ಬೋಧಿಸುತ್ತಾರೆ. ಇದು ಗೋರ್ಡನ್ ಫೀ ಅವರಿಂದ ವಿವರಿಸಲ್ಪಟ್ಟಿದೆ: "ಪೌಲನು ... ಶಿಲುಬೆಗೆ ಹಾಕಲ್ಪಟ್ಟವನ ಮುಖಾಂತರ ರಕ್ಷಣೆಗೆ ಸಂಬಂಧಿಸಿ ಹೇಳಿದ್ದಾನೆ (1:23, 24, 2:2ರಲ್ಲಿ ಯಂತೆ). ಮತ್ತು ದೇವರ ಜನರು ಅದನ್ನು ಸ್ಪಷ್ಟವಾಗಿ 'ಅರ್ಥಮಾಡಿಕೊಳ್ಳುವರು' ಯಾಕಂದರೆ ಅವರು ಪರಿಶುದ್ಧಾತ್ಮನನ್ನು ಹೊಂದಿಕೊಂಡಿದ್ದಾರೆ."[3]

ಪರಿಶುದ್ಧಾತ್ಮನು ಪ್ರತಿಯೊಬ್ಬ ಕ್ರೈಸ್ತನಿಗೆ ದೇವರ ವಾಕ್ಯವನ್ನು ವೈಯಕ್ತಿಕವಾಗಿ ಬೋಧಿಸುವನು ಇಲ್ಲವೇ ಪ್ರಕಟಿಸುವನು ಎಂದು ಇಲ್ಲವೇ ಪರಿಶುದ್ಧಾತ್ಮನು ಸಹಾಯ ಮಾಡದಿದ್ದರೆ ಜನರು ವಾಕ್ಯವನ್ನು ಅರ್ಥಮಾಡಿಕೊಳ್ಳುವದಿಲ್ಲ ಎಂದು ಪೌಲನು ಬೋಧಿಸುತ್ತಿರುವದಿಲ್ಲ, ಪರಿಶುದ್ಧಾತ್ಮನಿಂದ ಪ್ರೇರೇಪಿಸಲ್ಪಟ್ಟ ಜನರ ಮುಖಾಂತರ ದೇವರು ತನ್ನ ಜ್ಞಾನವನ್ನು ಪ್ರಕಟಿಸಿದನೆಂದು ಅವನು ಬೋಧಿಸಿದನು. ಆ ಪ್ರಕಟನೆಯ ಮುಖಾಂತರ, ದೇವರ ವಿಚಾರಗಳು ತಿಳಿಯಲ್ಪಡಬಹುದು (1 ಕೊರಿಂಥ 2:10-12).

## ದೇವರ ವಾಕ್ಯವನ್ನು ನಾವು ಹೇಗೆ ಕಲಿತುಕೊಳ್ಳುವೆವು?

### ಲೌಕಿಕವಾದ ದೃಷ್ಟಿಕೋನದಿಂದ ಅಲ್ಲ

ಆತ್ಮಿಕನಲ್ಲದ ವ್ಯಕ್ತಿಯೂ ದೇವರ ವಾಕ್ಯವನ್ನು ಯಾಕೆ ಅರ್ಥಮಾಡಿಕೊಳ್ಳುವದಿಲ್ಲ ಇಲ್ಲವೇ ಸ್ವೀಕರಿಸುವದಿಲ್ಲ ಎಂಬುದಕ್ಕೆ ಪೌಲನು ಎರಡು ಕಾರಣಗಳನ್ನು ಕೊಟ್ಟನು: (1) ದೇವರ ಪ್ರಕಟನೆಯು ಅವನಿಗೆ "ಹುಚ್ಚುತನವಾಗಿದೆ," ಆತ್ಮಿಕನಲ್ಲದ ವ್ಯಕ್ತಿಯ ಯೋಚನೆಯ ಲೌಕಿಕ ಮಾರ್ಗದ ಕಾರಣದಿಂದ ಅವನಿಗೆ ದೇವರ ಬೋಧನೆಗಳು ಅಪರಿಚಿತವಾದವುಗಳಾಗಿವೆ. "ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಗೆ ಹುಚ್ಚು ಮಾತಾಗಿದೆ" (1 ಕೊರಿಂಥ 1:18ಎ) ಎಂದು ಪೌಲನು ವಿವರಿಸಿದನು; "ನಾವಾದರೋ ಶಿಲುಬೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ; ಇಂಥ ಕ್ರಿಸ್ತನ ಸಂಗತಿಯು ಯೆಹೂದ್ಯರಿಗೆ ವಿಘ್ನವೂ ಅನ್ಯ ಜನರಿಗೆ ಹುಚ್ಚು ಮಾತೂ ಆಗಿದೆ" (1 ಕೊರಿಂಥ 1:23). ದೇವರ ಜ್ಞಾನವು ಲೌಕಿಕ ವ್ಯಕ್ತಿಯ ವಿಚಾರದಿಂದ ಹೊರಗಿರುವದರಿಂದ, ಅವನು ಅದನ್ನು ಸ್ವೀಕರಿಸುವದಿಲ್ಲ. (2) ದೇವರ ಪ್ರಕಟನೆಯು "ಅತ್ಮಿಕವಾಗಿ ನಿರ್ಣಯಿಸಲ್ಪಡುತ್ತದೆ." ಆತ್ಮಿಕನಲ್ಲದ ವ್ಯಕ್ತಿಯು ಲೋಕದ ದೃಷ್ಟಿಕೋನದಿಂದ ಜ್ಞಾನವನ್ನು ನಿರ್ಣಯಿಸುವದರಿಂದ ಅವನು ದೇವರ ಸತ್ಯವನ್ನು ಅರ್ಥ ಮಾಡಿಕೊಳ್ಳಲಾರನು:

> ದೇವರು ಜ್ಞಾನಿಗಳನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಬಲಿಷ್ಠರನ್ನು ನಾಚಿಕೆ ಪಡಿಸುವದಕ್ಕಾಗಿ ಈ

ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ ... ಹೀಗಿರಲು ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ (1 ಕೊರಿಂಥ 1:27-29).

> "ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟ ಮಾಡಿದ್ದೀ" (ಮತ್ತಾಯ 11:25ಬಿ).

> "ದೇವರಿಂದ ಹುಟ್ಟಿದವನು ದೇವರ ಮಾತುಗಳನ್ನು ಕೇಳುತ್ತಾನೆ. ನೀವು ದೇವರಿಂದ ಹುಟ್ಟದ ಕಾರಣ ಅವುಗಳನ್ನು ಕೇಳುವದಿಲ್ಲ" (ಯೋಹಾನ 8:47).

ಅಪೊಸ್ತಲರಿಗೆ ಮತ್ತು ಪ್ರವಾದಿಗಳಿಗೆ ಅವರು ದೇವರ ಮನಸ್ಸನ್ನು "ತಿಳಿದು" ಕೊಳ್ಳ ಲಿಕ್ಕಾಗುವಂತೆ ಆತ್ಮನು ಕೊಡಲ್ಪಟ್ಟನು (1 ಕೊರಿಂಥ 2:12). ಅವರು ಆತನ ವಾಕ್ಯವನ್ನು ಉಳಿದ ನಮಗೆ ಪ್ರಕಟಿಸಲು ಮತ್ತು ದೇವರ ಜ್ಞಾನವನ್ನು ಅರ್ಥ ಮಾಡಿಕೊಳ್ಳಲು ನಮಗೆ ಸಾಧ್ಯಮಾಡಲು ದೇವರ "ವಾಕ್ಯಗಳನ್ನು" ಆತ್ಮನು ಅವರಿಗೆ ಕೊಟ್ಟನು. ಪರಿಶುದ್ಧಾತ್ಮನ ಸಂಗತಿಗಳನ್ನು ನಾವು ಅರ್ಥಮಾಡಿ ಕೊಳ್ಳಲಿಕ್ಕಾಗದಂತೆ - ಅವುಗಳ ಮುಖಾಂತರ ವಾಗಿ ಆತ್ಮವಲ್ಲ, ಆದರೆ ವಾಕ್ಯವು ಕೊಡಲ್ಪಟ್ಟಿದೆ. ಆತ್ಮನಿಂದ ನೇರವಾದ ಪ್ರಟನೆಯಿಂದ ಅಪೊಸ್ತಲರು ಅದನ್ನು ಹೊಂದಿಕೊಂಡರು, ದೇವರ ಚಿತ್ತವನ್ನು ಪರಿಶುದ್ಧ ಬರಹಗಳ ಅಧ್ಯಯನ ಮಾಡುವದರಿಂದ ನಾವು ಕಲಿತುಕೊಳ್ಳತಕ್ಕದ್ದು. ಆತ್ಮಿಕ ಮನೋ ದೃಷ್ಟಿಯಿಂದ ಓದುವದರಿಂದ ನಾವು ದೇವರ ವಾಕ್ಯವನ್ನು ಕಲಿತುಕೊಳ್ಳುತ್ತೇವೆ, ಆದರೆ ಅವರು ಅದನ್ನು ಪರಿಶುದ್ಧಾತ್ಮನ ನೇರವಾದ ಪ್ರಕಟನೆಯಿಂದ ಹೊಂದಿಕೊಂಡರು.

**ಮುಂದುವರಿದ ಅಧ್ಯಯನದ ಮುಖಾಂತರ**

ಈಗ ದೈವಪ್ರೇರಿತ ಜನರ ಬರಹಗಳಲ್ಲಿ ಒಳಗೊಂಡಿರುವ ದೇವರ ರಹಸ್ಯಗ ಳನ್ನು ಪರಿಶುದ್ಧಾತ್ಮನು ಅಪೊಸ್ತಲರಿಗೂ ಪ್ರವಾದಿಗಳಿಗೂ ಪ್ರಕಟಿಸಿದನು. ನಮಗೆ ತಿಳಿಸಲು, ನಮಗೆ ತಿಳುವಳಿಕೆ ಕೊಡಲು ಮತ್ತು ದೇವರ ಸತ್ಯದ ಜ್ಞಾನಕ್ಕೆ ತರಲು ಇವು ಬರೆಯಲ್ಪಟ್ಟವು. ನಮ್ಮನ್ನು ಗಲಿಬಿಲಿಗೊಳಿಸಲು ಅವು ಬರೆಯಲ್ಪಡಲಿಲ್ಲ. ದೇವರ ವಾಕ್ಯದ ಮುಂದುವರಿದ ಅಧ್ಯಯನದಿಂದ ನಾವು ಸತ್ಯವನ್ನು ತಿಳಿದುಕೊಳ್ಳುತ್ತೇವೆ. "ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನೀವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದು ಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು" ಎಂದು ಯೇಸು ಹೇಳಿ ದನು (ಯೋಹಾನ 8:31ಬಿ, 32).

ಪೌಲನು ಹೀಗೆ ಬರೆದನು,

> ನೀವು ಓದಿ, ಅರ್ಥಮಾಡಿಕೊಂಡ ಸಂಗತಿಗಳನ್ನು ಬಿಟ್ಟು ಬೇರಾವದನ್ನೂ ನಾವು ಬರೆಯುವದಿಲ್ಲ, ಮತ್ತು ಕಡೇ ತನಕ ನೀವು ಅರ್ಥಮಾಡಿ ಕೊಳ್ಳುವಿರೆಂದು ನಿರೀಕ್ಷಿಸುತ್ತೇವೆ (2 ಕೊರಿಂಥ 1:13).

> ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ದೈವಪ್ರಕಟನೆಯಿಂದ ನನಗೆ ತಿಳಿಸಲ್ಪಟ್ಟಿತೆಂಬುದನ್ನೂ ನೀವು ಕೇಳಿದ್ದೀರಲ್ಲಾ. ಅದನ್ನು ಕುರಿತು ನಾವು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ; ಬರೆದದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು

> ನೀವು ತಿಳುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೊಸ್ತಲರಿಗೂ ಪ್ರವಾದಿಗಳಿಗೂ ಪರಿಶುದ್ಧಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ (ಎಫೆಸ 3:3-5).

ದೇವರ ಸತ್ಯವನ್ನು ನಮಗೆ ಪ್ರಕಟಿಸುವದಕ್ಕಾಗಿ ಅಪೊಸ್ತಲರೂ ಪ್ರವಾದಿಗಳೂ ಬರೆದರು. ಓದುವದರಿಂದ ಈ ಸತ್ಯವನ್ನು ಅರ್ಥಮಾಡಿ ಕೊಳ್ಳುತ್ತೇವೆ. ನಮಗೆ ಪರಿಶುದ್ಧಾತ್ಮನು ಇಲ್ಲದಿದ್ದರೆ ಈ ಸತ್ಯವನ್ನು ನಾವು ಅರ್ಥಮಾಡಿಕೊಳ್ಳಲಾರೆವು ಎಂದು ಎಲ್ಲಿಯೂ ಹೇಳಿರುವದಿಲ್ಲ. ಸತ್ಯದಲ್ಲಿ ಪ್ರತಿಯೊಬ್ಬ ಕ್ರೈಸ್ತನನ್ನು ಪರಿಶುದ್ಧಾತ್ಮನು ನಡಿಸುತ್ತಾನೆ ಎಂಬ ತತ್ವಕ್ಕೆ ಗೂಢಾರ್ಥವುಳ್ಳ ಮನವಿಯಿದೆ, ಆದರೆ ಅದು ಯಾವುದೇ ಪರಿಶುದ್ಧ ಬರಹದ ತತ್ವದ ಮೇಲೆ ಸ್ಥಾಪಿಸಲ್ಪಟ್ಟಿರುವದಿಲ್ಲ.

*ದೇವರ ಲಿಖಿತ ವಾಕ್ಯದ ಮೂಲ ತತ್ವಗಳನ್ನು ತಪ್ಪಾಗಿ ತಿಳಿದು ಕೊಳ್ಳುವವರು ಅಧ್ಯಯನದ ಮತ್ತು ಧ್ಯಾನದ ತಮ್ಮ ಕೊರತೆಯ ಕಾರಣದಿಂದ ಹಾಗೆ ಮಾಡುವರು. ಅವರಿಗೆ ಪ್ರಕಾಶ ಕೊಡುವದರಲ್ಲಿ ಆತ್ಮನು ಸೋತು ಹೋಗಿರುವದಿಲ್ಲ.* ಪೌಲನ ಪತ್ರಿಕೆಗಳಲ್ಲಿ "ಕೆಲವು ಮಾತುಗಳು ಇಳಿಯುವದಕ್ಕೆ ಕಷ್ಟವಾಗಿವೆ. ವಿದ್ಯಾಹೀನರೂ ಚಪಲ ಚಿತ್ತರೂ ಹೇಗೆ ನಮಗಿರುವ ಮಿಕ್ಕಾದ ಗ್ರಂಥಗಳಿಗೆ ತಪ್ಪಾದ ಅರ್ಥ ಮಾಡಿಕೊಂಡಿದ್ದರೋ ಹಾಗೆಯೇ ಇವುಗಳಿಗೂ ತಪ್ಪಾದ ಅರ್ಥ ಮಾಡಿಕೊಂಡು ತಮಗೆ ನಾಶವನ್ನುಂಟು ಮಾಡಿಕೊಳ್ಳುತ್ತಾರೆ" (2 ಪೇತ್ರ 3:16) ಎಂದು ಪೇತ್ರನು ಬರೆದನು. ಇದನ್ನು ತಪ್ಪಿಸಿಕೊ ಳ್ಳುವ ಮಾರ್ಗವು, "ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ" ಇರುವುದು (2 ಪೇತ್ರ 3:18ಎ). ಪೇತ್ರನು ತಿಳುವಳಿಕೆಯ ಕೊರತೆಯನ್ನೂ ಕಲಿಯದೇ ಇದ್ದ ಪರಿಸ್ಥಿತಿಯ ಕೆಡಿಸುವಿಕೆಯನ್ನೂ ದೂರಿದ್ದು ಪರಿಶುದ್ಧಾತ್ಮನ ವೈಯಕ್ತಿಕ ನಡಿಸುವಿಕೆಯನ್ನು ಸ್ವೀಕರಿಸುವದರಲ್ಲಿ ಸೋತು ಹೋದದ್ದರ ಬಗ್ಗೆ ಅಲ್ಲ.

ಪರಿಶುದ್ಧಾತ್ಮನಿಂದ ಸಹಾಯ ಮಾಡಲ್ಪಟ್ಟಿರುವವರು ಮಾತ್ರವೇ ಅದನ್ನು ಅರ್ಥಮಾಡಿಕೊಳ್ಳಲಿಕ್ಕಾಗುವಂತೆ, ಪರಿಶುದ್ಧ ಬರಹಗಳನ್ನು ಬರೆದವರು ದೇವರ ವಾಕ್ಯ ವನ್ನು ರಹಸ್ಯದಿಂದ ಮುಚ್ಚಿಡಲಿಲ್ಲ. ಆತ್ಮನ ಮಾರ್ಗ ದರ್ಶನದಿಂದ ದೇವರ ಪ್ರಕಟಣೆಯನ್ನು ಯಾರಾದರೂ ಓದಿ ಅರ್ಥಮಾಡಿಕೊಳ್ಳುವಂತೆ ಅವರು ಬರೆದರು.

## ಆತ್ಮನ ಮತ್ತು ದೇವರ ವಾಕ್ಯದ ಮಧ್ಯದಲ್ಲಿ ಯಾವ ಸಂಬಂಧವಿದೆ?

ತಾನು ಅಪೊಸ್ತಲರಿಗೆ ಏನನ್ನು ಕೊಟ್ಟನು ಎಂಬುದರ ಬಗ್ಗೆ ಯೇಸು ಮಾತಾಡಿದನು:

> ನನ್ನನ್ನು ಪ್ರೀತಿಸದೆ ಇರುವವನು ನನ್ನ ಮಾತುಗಳನ್ನು ಕೈಕೊಂಡು ನಡೆಯುವದಿಲ್ಲ; ನೀವು ಆಲಿಸುವ ಮಾತು ನನ್ನದಲ್ಲ, ನನ್ನನ್ನು ಕಳುಹಿಸಿದ ತಂದೆಯ ಮಾತೇ (ಯೋಹಾನ 14:24).
>
> ಹೇಗಂದರೆ ನೀನು ನನಗೆ ಕೊಟ್ಟ ಮಾತುಗಳನ್ನು ನಾನು ಇವರಿಗೆ ಕೊಟ್ಟಿದ್ದೇನೆ; ಇವರು ಆ ಮಾತುಗಳನ್ನು ಕೈಕೊಂಡಿದ್ದಾರೆ (ಯೋಹಾನ 17:8).
>
> ನಾನು ನಿನ್ನ ವಾಕ್ಯವನ್ನು ಇವರಿಗೆ ಕೊಟ್ಟಿದ್ದೇನೆ (ಯೋಹಾನ 17:14ಎ).

> ಯಾಕಂದರೆ ನನ್ನಷ್ಟಕ್ಕೆ ನಾನೇ ಮಾತಾಡಿದವನಲ್ಲ; ನನ್ನನ್ನು ಕಳುಹಿಸಿ ಕೊಟ್ಟ ತಂದೆಯೇ ನೀನು ಇಂಥಿಂಥದನ್ನು ಹೇಳಬೇಕು. ಹೀಗೆ ಹೀಗೆ ಮಾತಾಡಬೇಕು ಎಂಬದಾಗಿ ನನಗೆ ಆಜ್ಞೆ ಕೊಟ್ಟಿದ್ದಾನೆ. ಆತನ ಆಜ್ಞೆ ನಿತ್ಯಜೀವವಾಗಿದೆ ಎಂದು ಬಲ್ಲೆನು. ಆದದರಿಂದ ನಾನು ಮಾತಾಡುವದನ್ನೆಲ್ಲಾ ತಂದೆ ನನಗೆ ಹೇಳಿದ ಮೇರೆಗೆ ಮಾತಾಡುತ್ತೇನೆ (ಯೋಹಾನ 12:49, 50).

ಹೊಸ ಒಡಂಬಡಿಕೆಯ ಸಂದೇಶವು ಯೇಸುವಿನೊಂದಿಗೆ ಪ್ರಾರಂಭವಾಯಿತು: "ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು" (ಇಬ್ರಿಯ 2:3ಬಿ).

ಯೇಸುವು ತಂದೆಯಿಂದ ಹೊಂದಿದ ವಾಕ್ಯಗಳನ್ನು ಆತನು ಅಪೊಸ್ತಲರಿಗೆ ಹೇಳಿದ ವಾಕ್ಯಗಳಾಗಿದ್ದವು. ತಂದೆಯ ಬಳಿಗೆ ಹಿಂದಿರುಗಲು ಯೇಸುವು ಭೂಲೋಕವನ್ನು ಬಿಟ್ಟನಂತರ, ಪರಿಶುದ್ಧಾತ್ಮನಿಂದ ಅಪೊಸ್ತಲರ ಮನಸ್ಸುಗಳಿಗೆ ತರಲ್ಪಟ್ಟವು (ಯೋಹಾನ 14:26). ದೇವರ ವಾಕ್ಯದ ಪ್ರಕಟನೆ, ದೃಢಪಡಿಸುವಿಕೆ ಮತ್ತು ಕಾಪಾಡುವಿಕೆಯು ಪರಿಶುದ್ಧಾತ್ಮನ ಕಾರ್ಯದ ಮೇಲೆ ಅವಲಂಭಿಸಿದ್ದವು.

**ಪ್ರಕಟನೆಯಲ್ಲಿ**

ನಮಗಿರುವ ಪರಿಶುದ್ಧ ಬರಹಗಳು ದೇವರ ವಾಕ್ಯವಾಗಿದೆ ಯಾಕಂದರೆ ಅದನ್ನು ಬರೆದಿಟ್ಟವರಿಗೆ ಪರಿಶುದ್ಧಾತ್ಮನು ವಾಕ್ಯವನ್ನು ಪ್ರಕಟಿಸಿದನು. "ಪರಿಶುದ್ಧ ಬರಹದಲ್ಲಿರುವ ಯಾವ ಪ್ರವಾದನ ವಾಕ್ಯವೂ ಕೇವಲ *ಮಾನವ* ಬುದ್ಧಿಯಿಂದ ವಿವರಿಸತಕ್ಕಂಥದಲ್ಲ ವೆಂಬುದನ್ನು ಮುಖ್ಯವಾಗಿ ತಿಳಿದುಕೊಳ್ಳಿರಿ. ಯಾಕಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪರಿಶುದ್ಧಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" (2 ಪೇತ್ರ 1:20, 21). ಪರಿಶುದ್ಧ ಬರಹಗ ಳಲ್ಲಿ ಹೇಳಲ್ಪಟ್ಟದ್ದು ದೇವರು ಹೇಳ ಬಯಸಿದಂಥದ್ದರ ಅರ್ಥವಿವರಣೆಯಾಗಿರುವದಿಲ್ಲ. ಪ್ರವಾದಿಯ ವೈಯಕ್ತಿಕ ಅಭಿಪ್ರಾಯಗಳು ಪರಿಶುದ್ಧ ಬರಹಗಳಲ್ಲಿ ಕಂಡು ಬರುವದಿಲ್ಲ. 2 ಪೇತ್ರ 1:21ರಲ್ಲಿಯ "for"ದ ಉಪಯೋಗವು ಆ ವಚನವನ್ನು ವಚನ 20ಕ್ಕೆ ಕೂಡಿಸುತ್ತದೆ; ವಚನ 20, "ಒಬ್ಬನ ಸ್ವಂತ ವಿವರಣೆಗೆ" ಸಂಬಂಧಿಸಿದೆ. "ಯಾಕಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪರಿಶುದ್ಧಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" ಎಂದು ಪೇತ್ರನು ಬರೆದನು. ಪ್ರವಾದಿಯು ಬರೆದದ್ದು ದೇವರು ಪ್ರಕಟಿಸಬೇಕೆಂದು ಬಯಸಿದ್ದರ ಬಗ್ಗೆ ತನ್ನ ಸ್ವಂತ - ವೈಯಕ್ತಿಕ ಅರ್ಥವಿವರಣೆಯಾಗಿರಲಿಲ್ಲ, ಆದರೆ ದೇವರ ಸ್ವಂತ ಸಂದೇಶವಾ ಗಿತ್ತು (ನೋಡಿರಿ ಮತ್ತಾಯ 10:19, 20).

**ದೃಢಪಡಿಸುವಿಕೆಯಲ್ಲಿ**

ಪರಿಶುದ್ಧಾತ್ಮನು ವಾಕ್ಯವನ್ನು ಪ್ರಕಟಿಸಿದ್ದು ಮಾತ್ರವೇ ಅಲ್ಲದೆ, ಆತನು ಅದನ್ನು ದೃಢಪಡಿಸಿದನು. ಯೇಸುವಿನ ಬೋಧನೆಯನ್ನು ಕುರಿತು ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ಹೇಳಿದ್ದಾನೆ: "ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು; ಮತ್ತು ದೇವರು ಅವರ ಕೈಯಿಂದ ಸೂಚಕ ಕಾರ್ಯಗಳನ್ನೂ ಅದ್ಭುತ ಕಾರ್ಯ ಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪರಿಶುದ್ಧಾತ್ಮ ವರಗಳನ್ನು

ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿಕೊಡುತ್ತಿದ್ದನು" (2:3ಬಿ, 4). ಇತರ ಪರಿಶುದ್ಧ ಬರಹಗಳು ಹೀಗೆ ಹೇಳುತ್ತವೆ:

> ಇತ್ತಲಾಗಿ ಅವರು ಹೊರಟುಹೋಗಿ ಎಲ್ಲೆಲ್ಲಿಯೂ ಸುವಾರ್ತೆಯನ್ನು ಸಾರಿದರು, ಮತ್ತು ಕರ್ತನು ಅವರ ಕೂಡ ಕೆಲಸ ಮಾಡುತ್ತಾ ಸೂಚಕ ಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದನು (ಮಾರ್ಕ 16:20).

> ಹೀಗಿರಲಾಗಿ, ಅವರು ಬಹುಕಾಲ ಅಲ್ಲಿದ್ದು ಕರ್ತನು ಅವರ ಕೈಯಿಂದ ಸೂಚಕ ಕಾರ್ಯಗಳೂ ಅದ್ಭುತ ಕಾರ್ಯಗಳೂ ಆಗುವಂತೆ ದಯಪಾಲಿಸಿ ತನ್ನ ಕೃಪಾ ವಾಕ್ಯಕ್ಕೆ ಸಾಕ್ಷಿಕೊಟ್ಟದ್ದರಿಂದ ಆತನ ಮೇಲೆ ಭರವಸವಿಟ್ಟು ಧೈರ್ಯದಿಂದ ಮಾತಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 14:3).

ಅದ್ಭುತ ಕಾರ್ಯಗಳ ಮತ್ತು ಸೂಚಕ ಕಾರ್ಯಗಳ ಮುಖಾಂತರ ದೇವರು ತನ್ನ ವಾಕ್ಯ ವನ್ನು ದೃಢಪಡಿಸಿದನು.

**ಕಾಪಾಡುವಿಕೆಯಲ್ಲಿ**

ಪರಿಶುದ್ಧಾತ್ಮನ ಮುಖಾಂತರವಾಗಿ ಕೊಡಲ್ಪಟ್ಟ ವಾಕ್ಯವು ಪ್ರೇರೇಪಿತ ಜನರ ಹಸ್ತಗಳಿಂದ ಅಖಿತ ರೂಪದಲ್ಲಿ ಕಾಪಾಡಿ ಇಡಲ್ಪಟ್ಟಿದೆ. "... ನಾನು ನಿಮಗೆ ಬರೆಯುವ ಸಂಗತಿಗಳು ಕರ್ತನ ಆಜ್ಞೆಯಾಗಿದೆ" (1 ಕೊರಿಂಥ 14:37) ಎಂದು ಪೌಲನು ಹೇಳಿದನು. ಪೌಲನು ಕೊಟ್ಟ ಬೋಧನೆಗಳು ಅವನಿಗೆ ಆತ್ಮನಿಂದ (1 ಕೊರಿಂಥ 2:12, 13), ಇತರರು ಮಾತನಾಡಿದ ಮತ್ತು ಬರೆದ ಒಂದೇ ಮೂಲದಿಂದ (ಎಫೆಸ 3:3-5) ಪ್ರಕಟಿಸಲ್ಪಟ್ಟಿದ್ದವು.

ಪರಿಶುದ್ಧಾತ್ಮನ ಮುಖಾಂತರವಾಗಿ ದೇವರ ಪ್ರೇರಿತ ವಾಕ್ಯದಂತೆ ಬೈಬಲು ನಮಗೆ ಬಂದಿದೆ (2 ತಿಮೊಥೆ 3:16; 2 ಪೇತ್ರ 1:20, 21).

## ಮುಕ್ತಾಯ

ಪರಿಶುದ್ಧಾತ್ಮನು ದೇವರ ಮಾಧ್ಯಮವಾಗಿದ್ದು ಆತನ ಮುಖಾಂತರ ತನ್ನ ವಾಕ್ಯ ವನ್ನು ದೇವರು ನಮಗೆ ಪ್ರಕಟಿಸಿರುವನು. ಈ ಇಂದಿನ ಯುಗದಲ್ಲಿ, ಯೇಸುವು ಎಲ್ಲಾ ಅಧಿಕಾರವುಳ್ಳಾತನು (ಮತ್ತಾಯ 28:18) - ವೈಯಕ್ತಿಕವಾಗಿ ಮಾನವತೆಗೆ ವಾಕ್ಯವನ್ನು ತಂದನು ಹಾಗೂ ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟ ಜನರ ಬರಹಗಳ ಮುಖಾಂತರ ಅದನ್ನು ಕಾಪಾಡಿ ಉಳಿಸಿರುವನು. ಪರಿಶುದ್ಧಾತ್ಮನ ಕಾರ್ಯದ ಮೇಲೆ ಅವಲಂಭಿಸಿ, ಪರಿಶುದ್ಧ ಬರಹಗಳ ಪ್ರತಿಯೊಂದು ಭಾಗವು ನಮಗೆ ದೇವರ ಖಂಡಿತ ವಾದ ಪ್ರಕಟಣೆಯನ್ನು ಒಳಗೊಂಡಿದೆ ಎಂಬ ಭರವಸೆ ನಮಗಿರುವುದು.

---

ಟಿಪ್ಪಣೆಗಳು

[1]R. C. H. Lenski, *The Interpretation of St. Paul's First and Second Epistles to the Corinthians* (Minneapolis, Minn.: Augsburg Publishing House, 1963), 112-

13. [2]Ibid., 111-12. [3]Gordon D. Fee, *The First Epistle to the Corinthians,* The New International Commentary on the New Testament (Grand Rapids, Mich.: Wm. B. Eerdmans Publishing Co., 1987), 113.

© 2009 Truth for Today